





ನೆದರ್‌ಲ್ಯಾಂಡ್ಸ್ ಮೇಲೆ ಜರ್ಮನರು ದಾಳಿ ನಡೆಸಿದ ಸಂದರ್ಭದಲ್ಲಿ, ಜಾರ್ಜ್‌ಜಾನ್ ಲಿಯೋನೆಲ್ ಮಡುರೋ ಎಂಬ ಡಚ್ ಕಾನೂನು ವಿದ್ಯಾರ್ಥಿ ದಾಳಿಕೋರರನ್ನು ಹಿಮ್ಮೆಟ್ಟಿಸಿದ್ದ. ಆ ನೆನಪಿಗಾಗಿ ಹೇಗ್ ನಗರದ ಸ್ಕೇವೆನಿನ್‌ನಲ್ಲಿ ಇರುವ ಒಂದು ಪ್ರದೇಶಕ್ಕೆ 'ಮಡುರೋಪ್ಲೇನ್' ಎಂದು, ಮಿನಿಯೇಚರ್ ಪಾರ್ಕ್‌ಗೆ 'ಮಡುರೋಡಾಮ್' ಎಂದು ನಾಮಕರಣ ಮಾಡಲಾಯಿತು. ಅಂದಹಾಗೆ, ನೆದರ್‌ಲ್ಯಾಂಡ್ಸ್‌ನಲ್ಲಿ ಅತಿ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಸ್ಥಳಗಳಲ್ಲಿ ಮಡುರೋಡಾಮ್ 5ನೇ ಸ್ಥಾನ ಪಡೆದಿದೆ.

ಡಚ್ ಪರಂಪರೆಯ 100 ತಾಣಗಳಲ್ಲಿ ಒಂದಾದ ಹೇಗ್ ಪಟ್ಟಣದ ಬಿನೆನ್ಹಾಫ್, ಆಮ್‌ಸ್ಟರ್‌ಡ್ಯಾಂನ ಪ್ರತಿಷ್ಠಿತ ರಿಜ್ಕೋಸ್ ಮ್ಯೂಸಿಯಂ, ನೆದರ್‌ಲ್ಯಾಂಡ್ಸ್‌ನ ಪ್ರಮುಖ ಅಂತರರಾಷ್ಟ್ರೀಯ ಷಿಫೋಲ್ ವಿಮಾನ ನಿಲ್ದಾಣ, ಮಿನಿಯೇಚರ್ ವಿಮಾನಗಳು, ಇಂಟರ್ ನ್ಯಾಷನಲ್ ಕೋರ್ಟ್ ಆಫ್ ಜಸ್ಟೀಸ್ – ಪೀಸ್ ಪ್ಯಾಲೇಸ್, ವಿಶ್ವದ ಅತಿದೊಡ್ಡ ಬಂದರು ರೋಟರ್‌ಡ್ಯಾಂ, ಎರಾಸ್ಮಸ್ ಬ್ರಿಡ್ಜ್, ಯೂರೋ ಮಾಸ್ಟ್, ಸ್ಕೈಲೈನ್, ವಿಂಡ್ ಮಿಲ್, ಟುಲಿಪ್ ಹೂವಿನ ತೋಟಗಳು, ಅನ್ನೆ ಫ್ರ್ಯಾಂಕ್ ಮನೆ, ಸೇಂಟ್ ಜಾನ್ಸ್ ಕ್ಯಾಥೆಡ್ರಲ್, ಕೇಂದ್ರ ರೈಲು ನಿಲ್ದಾಣ, ಸಾಂಪ್ರದಾಯಿಕ ಡಚ್ ಕಾಲುವೆ ಮನೆಗಳು, ಸೇತುವೆಗಳು, ಕಾರ್ಖಾನೆಗಳು ಇತ್ಯಾದಿಗಳ ಪ್ರತಿಕೃತಿಗಳನ್ನು ಮೂಲ ರಚನೆಗೆ ಕುಂದು ಬಾರದಂತೆ, 1:25 ಪ್ರಮಾಣದಲ್ಲಿ ನಿರ್ಮಿಸಲಾಗಿದೆ. ಥೀಮ್ ಪಾರ್ಕ್‌ನಲ್ಲಿ ಕಳೆಯುವ ಕೆಲವು ತಾಸುಗಳಲ್ಲಿಯೇ ಹಾಲೆಂಡ್‌ನ ಸೊಬಗು, ಇತಿಹಾಸ ಹಾಗೂ ಸಂಸ್ಕೃತಿಯನ್ನು ಪರಿಚಯಿಸುವ ಸಾಹಸವನ್ನು 'ಮಡುರೋಡಾಮ್' ನಿರ್ಮಾಪಕರು ಮಾಡಿದ್ದಾರೆ.

ಚಿಕಣಿ ಮಾದರಿಗಳನ್ನು ಹೊಂದಿರುವ ಪಾರ್ಕ್ ಇದಾಗಿದ್ದರೂ, ಕಟ್ಟಡಗಳ ನೈಜತೆಗೆ ಕುಂದು ಬಾರದಂತೆ ಕಲಾಕೃತಿಗಳನ್ನು ರಚಿಸಲಾಗಿದೆ. ಕ್ಯಾಥೆಡ್ರಲ್ ಒಳಗೆ ಇಣುಕಿ ನೋಡಿದರೆ, ಬೆಂಚಿನಲ್ಲಿ ಜನರು ಕುಳಿತು ಪ್ರಾರ್ಥನೆ ಮಾಡುತ್ತಿರುವ ನೋಟವನ್ನೂ ಕಾಣಬಹುದಾಗಿದೆ. ರೋಟರ್‌ಡ್ಯಾಂ ಬಂದರಿನಲ್ಲಿ ಸರಕನ್ನು ಲೋಡ್ ಮಾಡುತ್ತಿರುವುದು, ಷಿಫೋಲ್ ವಿಮಾನ ನಿಲ್ದಾಣದಲ್ಲಿ ಹಾರಾಡುತ್ತಿರುವ ವಿಮಾನಗಳು, ಹಡಗು ಬಂದಾಗ ಸ್ವಯಂಚಾಲಿತವಾಗಿ ಮೇಲೆ ಹೋಗಿ ಹಡಗು ಹೋದ ನಂತರ ಯಥಾಸ್ಥಿತಿಗೆ ಮರಳುವ ಸೇತುವೆ, ರೈಲು–ಬಸ್ಸು ಹಾಗೂ ಟ್ರ್ಯಾಂಗಳ ಓಡಾಟ, ರಸ್ತೆಯ ಸಿಗ್ನಲ್‌ಗಳು, ರಸ್ತೆಗಳಲ್ಲಿ ಓಡಾಡುತ್ತಿರುವ ಜನ ಹಾಗೂ ಅವರು ಧರಿಸಿರುವ ಡಚ್ ಸಾಂಪ್ರದಾಯಿಕ ಉಡುಗೆ ತೊಡುಗೆಗಳು, ಕೆನಾಲ್‌ಗಳಲ್ಲಿ ಸಂಚರಿಸುತ್ತಿರುವ ಬೋಟ್ – ಇವೆಲ್ಲವೂ ನೋಡುಗರಲ್ಲಿ ನೈಜ ಅನುಭವವನ್ನು ಉಂಟುಮಾಡುವಷ್ಟು ಪರಿಣಾಮಕಾರಿಯಾಗಿವೆ.

ಥೀಮ್ ಪಾರ್ಕ್‌ನಲ್ಲಿ ಪ್ರವಾಸಿಗರು ಎಲ್ಲಿ ಬೇಕಾದರೂ ಓಡಾಡಲು ಸ್ವತಂತ್ರರು. ಡಚ್ ಸಂಸ್ಕೃತಿಯ ಪ್ರತೀಕಗಳಾದ ಕ್ಲಾಗ್ (ಮರದ ಶೂ) ದೈತ್ಯ ಟ್ಯುಲಿಪ್ ಹೂತೋಟದ ನಡುವೆ ಪ್ರವಾಸಿಗರು ಫೋಟೊ ತೆಗೆಸಿಕೊಂಡು ಆನಂದಿಸುತ್ತಾರೆ.

'ಫ್ಯಾಂಟಸಿ ಸಿಟ್ರಾನ್' 3 ಡಿ ಸೆಲ್ಫೀ ಫೋಟೊ ಬೂತ್‌ನಲ್ಲಿ ತೆಗೆದ ಚಿತ್ರಗಳನ್ನು ಸಾಫ್ಟ್‌ವೇರ್ ಸಹಾಯದಿಂದ '3 ಡಿ' ಮಾದರಿಗಳನ್ನು ರಚಿಸಬಹುದಾಗಿದೆ.

ಮಡುರೋಡಾಮ್ ನೋಡಿ ದಣಿದ ಪ್ರವಾಸಿಗರ ಹಸಿವು, ಬಾಯಾರಿಕೆಗಳನ್ನು ನೀಗಿಸಲು ಎರಡು ರೆಸ್ಟೋರೆಂಟ್‌ಗಳು ಅಲ್ಲಿವೆ. ಅಲ್ಲಿ ಡಚ್ ಸಾಂಪ್ರದಾಯಿಕ ಆಹಾರ ಸವಿಯಬಹುದು. ಭೇಟಿ ನೀಡಿದ ಸವಿ ನೆನಪಿಗಾಗಿ ಹಾಗೂ ನೆಂಟರಿಷ್ಟರಿಗೆ ನೀಡಲು ಉಡುಗೊರೆ ವಸ್ತುಗಳೂ ಅಲ್ಲಿ ಲಭ್ಯ.

ಆಮ್‌ಸ್ಟರ್‌ಡ್ಯಾಂನಿಂದ ಪ್ರವಾಸಿ ಸಂಸ್ಥೆ ನಿರ್ವಹಿಸುವ ಒಂದು ದಿನದ ಪ್ಯಾಕೇಜ್ ಟೂರ್‌ನಲ್ಲಿ – ಮಡುರೋಡಾಮ್, ಡೆನ್ ಹಾಗ್, ಡೆಲ್ಫ್ಟ್ ಮುಂತಾದ ಸ್ಥಳಗಳನ್ನು ವೀಕ್ಷಿಸಬಹುದು. ಸಾಕಷ್ಟು ಬಿಡುವಿದ್ದಲ್ಲಿ, ಹೇಗ್ ರೈಲ್ವೇ ಸ್ಟೇಶನ್ ಮುಂಭಾಗದಲ್ಲಿರುವ ನಿಲ್ದಾಣದಿಂದ ಟ್ರ್ಯಾಮ್ ನಂ.9 ಅಥವಾ ಬಸ್ ನಂ.22 ಮೂಲಕ ಮಡುರೋಡಾಮ್ ತಲುಪಬಹುದು. ಉದ್ಯಾನವನವನ್ನು 4–5 ಗಂಟೆಗಳ ಕಾಲ ವೀಕ್ಷಿಸಿ ನಂತರ ಕೇವಲ ಐದು ನಿಮಿಷ ಪ್ರಯಾಣಿಸಿದರೆ ಸಿಗುವ ಕುರ್ಹೌಸ್ ಬೀಚ್ ಹಾಗೂ ಅಲ್ಲಿರುವ ಒಳಾಂಗಣ ಮತ್ತು ಹೊರಾಂಗಣ ಶಿಲ್ಪಗಳ ಸಂಗ್ರಹಾಲಯಗಳನ್ನೂ ವೀಕ್ಷಿಸಬಹುದು.

ಕಾಲಮಾನಕ್ಕೆ ಅನುಗುಣವಾಗಿ ಥೀಮ್ ಪಾರ್ಕ್‌ನ ವೀಕ್ಷಣೆ ಸಮಯವನ್ನು ಬದಲಾಯಿಸಲಾಗುತ್ತದೆ. ಪ್ರವೇಶದ ಸಮಯ, ಪ್ರವೇಶ ಶುಲ್ಕ ಸೇರಿದಂತೆ ಥೀಮ್ ಪಾರ್ಕ್‌ಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು **madurodam.nl/en** ಜಾಲತಾಣದಿಂದ ಪಡೆಯಬಹುದು.

ಚಿತ್ರಗಳು: ಜಿ. ನಾಗೇಂದ್ರ, ರಾಜೇಂದ್ರ ಎನ್. ಆಚಾರ್ಯ